## ಪದಬಂಧ



ಎಡದಿಂದ ಬಲಕ್ಕೆ

1. ಸದ್ದಿದೆ ಎಂದರೆ ಅಲ್ಲಿ ಸಂಭ್ರಮ ಇರಲೇ ಬೇಕು 4
3. ಅನಿವಾರ್ಯ, ಏಕೆಂದರೆ ಇದು ಹುಟ್ಟಿನ ಇನ್ನೊಂದು ತುದಿ (ತಿರುಗಿದೆ) 3
4. ಕಾಯುವುದರಲ್ಲೇ ಒಂದು ಹಿತವಾದ ಸುಖವಿದೆ 3
6. ಚರ್ಚೆ ಏಕರೂಪದಲ್ಲೇ ಏಕೆ ಇರಬೇಕು ಎನ್ನುವುದು ತಿರುಗುಮುರುಗು 4
7. ನೊಂದುಬೆಂದವರ ಪಾಲಿನ ಸಹಿಸಲಾಗದಷ್ಟು ನೋವು 4
9. ಸಂತೋಷದಿಂದ ಸದಾ ಖುಷಿಖುಷಿಯಾಗಿರಿ 4
12. ರಾಜ್ಯಗಳಿಗೆ ಗೆರೆ ಎಳೆದರೂ ಸೂಸುವ ಪರಿಮಳ 4
15. ಅನುದಿನವೂ ಅರಿಯಲೇ ಬೇಕು, ಗೊತ್ತು ಮಾಡಿಕೊಳ್ಳಲೇಬೇಕು 4
17. ಎಲ್ಲಕ್ಕೂ ಒಂದು ವರ್ಣವಿದೆ, ಆದರೆ, ಇದಕ್ಕಿಲ್ಲ 4
18. ಮತ್ಸರ ಮತ್ತು ದ್ವೇಷಗಳಾಚೆಗಿನ ತಮಾಷೆ ಮನರಂಜನೆ 3
19. ಈ ಪೋಲಿ ಹುಡುಗನದು ಜಾಸ್ತಿ ಆಯಿತಲ್ಲ ಜಂಭ 4
20. ಕಿರಿಕಿರಿ ಜೊತೆಗೆ ನೀಡುವ ದೊಡ್ಡ ಕಿರುಕುಳ 4

ಮೇಲಿನಿಂದ ಕೆಳಕ್ಕೆ

1. ಸಂಗೀತ ಪಾಠದಲ್ಲಿ ಎಲ್ಲರೂ ಕಲಿಯಬೇಕಾದ ಸ್ವರಗಳು ತಿರುಗಿವೆ 4
2. ಎಲ್ಲರಿಗೂ ರಜ, ಆದರೆ ಈ ದಿನವೂ ಸೂರ್ಯನಿಗೆ ಕೆಲಸ 4
3. ನಗುತ್ತಲೇ ಸರಿಯಾಗಿ ಬಾರಿಸೋಣ ಬನ್ನಿ 3
5. ಊರಾಚೆಯ ಗುಡಿಯಲ್ಲಿ ಅಭಯ ನೀಡಲು ನಿಂತವನು 3
7. ವಿಷ್ಣುವಿನ ಹಾಸಿಗೆಯಾದ, ಶಿವನಿಗೆ ಹಾರವಾದ ನಾಗ 3
8. ಕೊನೆಗೂ ಪೀಡಕನಿಗೆ ಸಿಕ್ಕಿದ ಸರಿಯಾದ ಬಹುಮಾನ 3
10. ಅಂಬಲಿಗೂ ಗತಿ ಇಲ್ಲದ ನತದೃಷ್ಟ 3
11. ಅವಳಿಗಳ ಮದುವೆಗೆ ಸ್ವಲ್ಪ ಜಾಸ್ತಿಯೇ ಬೇಕು ಬಟ್ಟೆಬರೆ 3
13. ಮನೆ ಹುಡುಕುವುದು ಬಹಳ ಸುಲಭ. ಊರಿಗೊಂದೇ ಅಂಥಾ ಮನೆ ತಿರುಗಿದೆ 3
14. ತಪ್ಪೆಸಗಿದವನಿಗೆ ನೀಡಲಾಗುವ ದೊಡ್ಡ ಶಿಕ್ಷೆ ತಿರುಗಿದೆ 4
15. ನಿನಗೆ ದುರಂಹಕಾರ ಬಂದಿದೆ ಎನ್ನುವುದನ್ನು ಹೀಗೂ ಹೇಳಬಹುದು 4
16. ತಿಂದೂ ತಿಂದೂ ಒಂದು ಚೂರು ಜಾಸ್ತಿಯಾಯಿತು 3

### 22–04–2021 ಉತ್ತರಗಳು

ಎಡದಿಂದ ಬಲಕ್ಕೆ

1.ಪರಾಶರ 3.ಸಂಪದ 4.ಸಲ್ಲಾಪ 6.ವಿತ್ತತಜ್ಞ 7.ಮನ್ವಂತರ 9.ಭಾವಗೀತೆ 11.ರಸಪಾನ 13.ರಹದಾರಿ 15.ಸದಾರಮೆ 17. ಕಠಿಣ 18.ದಫ್ತರ 19.ಸುದರ್ಶನ

ಮೇಲಿನಿಂದ ಕೆಳಕ್ಕೆ

1.ಪದವಿ 2.ರಸಜ್ಞ 3.ಸಂಭೂತ 5.ಪಲ್ಲವ 7.ಮಮಕಾರ 8.ರಸಾಯನ 9.ಭಾಷ್ಯಕಾರ 10.ರಿಯಾಯಿತಿ 12.ಪಾನಕ 14.ಹಜಾರ 15.ಮೆಣಸು 16.ಸದನ

ಪ್ರಶ್ನಾಂಕಣ

# ಹಾಡು ಹಕ್ಕಿ ಮೋಡಿ ಮಾಡೋದು ಹೇಗೆ?

ಅನುಪಮ ಕಂಠದ ಹಕ್ಕಿ ಕೋಗಿಲೆ. ಕಾಗೆಯನ್ನೇ ಹೋಲುವ ಕೋಗಿಲೆಯನ್ನು ನೋಡಿರುವವರು ಕಡಿಮೆ. ಆದರೆ ಇದರ ಕಂಠಕ್ಕೆ ಮಾರುಹೋಗದವರು ಯಾರೂ ಇಲ್ಲ.

ಕೋಗಿಲೆ ಕುಕುಲಿಡೆ ಕುಟುಂಬಕ್ಕೆ ಸೇರಿರುವ ಒಂದು ಪಕ್ಷಿ. ಇದೊಂದು ರೀತಿಯ ಮೋಡಿಗಾರ ಹಕ್ಕಿ. ಅಲ್ಲದೆ ಇದು ಪರಾವಲಂಬಿಯೂ ಹೌದು. ಏಕೆಂದರೆ ಕೋಗಿಲೆ ಕಾಗೆಯ ಗೂಡಲ್ಲಿ ಮೊಟ್ಟೆ ಇಡುತ್ತದೆ. ಕಾಗೆಗೋ, ಇದು ತನ್ನ ಮೊಟ್ಟೆಯೋ, ಕೋಗಿಲೆಯದೋ ಎಂಬ ಅರಿವು ಕೂಡ ಇರುವುದಿಲ್ಲ. ಮರಿಕೋಗಿಲೆ ಬೆಳೆದಂತೆ ತನ್ನ ಕಂಠದಿಂದ ಹಾಡಲು ಶುರು ಮಾಡುತ್ತದೆ. ಆಗ ಕಾಗೆಗೆ ಕೋಗಿಲೆಯ ನಿಜ ಸ್ವರೂಪ ತಿಳಿಯುತ್ತದೆ. ತನ್ನ ಗೂಡಿನಿಂದ ಹೊರಗೆ ಅಟ್ಟುತ್ತದೆ. ಅಷ್ಟೊತ್ತಿಗಾಗಲೇ ಕೋಗಿಲೆ ಸ್ವತಂತ್ರವಾಗಿ ಹಾರಿ ಆಹಾರ ಸಂಗ್ರಹಿಸಿ ತಿನ್ನುವ ಸಾಮರ್ಥ್ಯ ಪಡೆದುಕೊಂಡಿರುತ್ತದೆ. ಹೊಟ್ಟೆಬಾಕಗಳಾದ ಕೋಗಿಲೆ ಮರಿಗಳು ಕಾಗೆಯ ಮರಿಗಳಿಗಿಂತಲೂ ಹೆಚ್ಚು ಉಂಡು ತಿಂದು, ಬೇಗ ಬೆಳೆದು, ರೆಕ್ಕೆ ಬಲಿತ ಕೂಡಲೇ ಗೂಡು ಬಿಟ್ಟು ಹಾರುತ್ತವೆ. ಕೋಗಿಲೆ ಮತ್ತು ಕಾಗೆಯ ಮೊಟ್ಟೆಗಳು ತಿಳಿ ಬೂದು ಬಣ್ಣ ಮತ್ತು ಕೆಂಪು ಚುಕ್ಕೆಗಳಿಂದ ಕೂಡಿದ್ದು, ಗಾತ್ರದಲ್ಲಿ ತುಸು ಏರುಪೇರು ಹೊಂದಿರುತ್ತವೆ.

## ಆಹಾರ ಏನೇನು?

ಕೋಗಿಲೆಗಳು ಕೀಟಗಳನ್ನು, ಕ್ರಿಮಿಕೀಟಗಳ ಮರಿಗಳನ್ನು ಮತ್ತು ವಿವಿಧ ಇತರ ಪ್ರಾಣಿಗಳನ್ನು ತಿನ್ನುತ್ತವೆ. ಜೊತೆಗೆ ಹಣ್ಣುಗಳನ್ನೂ ತಿನ್ನುತ್ತವೆ. ಕೋಗಿಲೆಗಳು ಸಾಮಾನ್ಯವಾಗಿ ಮಧ್ಯಮ ಗಾತ್ರದ ತೆಳು ಪಕ್ಷಿಗಳು. ಕೆಲವು ಜಾತಿಗಳು ವಲಸೆ ಇವೆ. ಆದರೆ ಕೋಗಿಲೆಗಳು ಹೆಚ್ಚಾಗಿ ಹಳ್ಳಿಗಳಲ್ಲೇ ವಾಸಿಸುತ್ತವೆ. ನಗರಗಳಲ್ಲಿ ವಾಸವಾಗಿರುವುದು ಬಹಳ ಕಡಿಮೆ. ಹೆಚ್ಚಾಗಿ ತೋಟಗಳು, ತೋಪುಗಳು ಹಾಗೂ ದೊಡ್ಡ ಎಲೆಯ ಮರಗಳಿಂದ ಕೂಡಿದ ಬಯಲಿನಲ್ಲಿಯೂ ಕಂಡುಬರುತ್ತವೆ. ಪಟ್ಟಣಗಳ ಕೈತೋಟದ ಮರಗಳಲ್ಲೂ ಕೋಗಿಲೆಗಳು ಕಾಣಸಿಗುತ್ತವೆ.



ಗಂಡು ಕೋಗಿಲೆಯು ಹೊಳಪಿನ ಕಪ್ಪು ಬಣ್ಣದ್ದಾಗಿದ್ದು ಹಳದಿ ಬೆರೆತ ಕೊಕ್ಕು ಮತ್ತು ಕಡು ಕೆಂಪು ಕಣ್ಣು ಹೊಂದಿರುತ್ತದೆ. ಹೆಣ್ಣು ಕೋಗಿಲೆಯು ಕಂದು ಬಣ್ಣದ್ದಾಗಿದ್ದು, ಅದರ ಮೈಯ ತುಂಬೆಲ್ಲಾ ಬಿಳಿಯ ಸಣ್ಣ ಪಟ್ಟೆಗಳಿರುತ್ತವೆ.

ಕೋಗಿಲೆಯು ಭಾರತವಲ್ಲದೆ ನೆರೆಯ ಶ್ರೀಲಂಕಾ, ಪಾಕಿಸ್ತಾನ, ಬಾಂಗ್ಲಾದೇಶ, ಮ್ಯಾನ್ಮಾರ್ ದೇಶಗಳಲ್ಲೂ ಕಂಡುಬರುತ್ತದೆ. ಈಶಾನ್ಯ ಭಾರತದ ಬಗೆಯ ಕೋಗಿಲೆಗಳು, ಉಳಿದ ಕಡೆಯವುಗಳಿಗಿಂತ ದೊಡ್ಡ ಮೈಕಟ್ಟು ಹೊಂದಿರುತ್ತವೆ.

ಬೇರೆಲ್ಲ ಹಕ್ಕಿಗಳಿಗೆ ಹೋಲಿಸಿದರೆ ಕೋಗಿಲೆ ರೂಪ ಲಾವಣ್ಯ ಇಲ್ಲದೆಯೂ ಎಲ್ಲರನ್ನೂ ಸೆಳೆಯುವ ಶಕ್ತಿ ಹೊಂದಿರುವ ಅಪರೂಪದ ಹಕ್ಕಿ.

■ ಯು.ಎ.